# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಆರ್.ಎಂ.ಕಲಾವತಿ, ಪಿಡಿಓ, ಎಂ.ಗೋಪಹಳ್ಳಿ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು- ಆದೇಶ.

**ಓದಲಾಗಿದೆ:** 1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ-8220/2015/ಡಿಆರ್‌ಇ-5, ದಿನಾಂಕ: 03-05-2017.

2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ ಬಿಡಿ-8220/2015/ಡಿಆರ್‌ಇ-5, ದಿನಾಂಕ: 12-04-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ: 12-04-2017 ರವರ ಪತ್ರದೊಂದಿಗೆ ಕನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ಶ್ರೀ ಆರ್.ಧನಂಜಯ್ಯ ಬಿನ್ ರಾಮಣ್ಣ, ಬಿಲ್ಲೆದೊಡ್ಡಿ (ಎಂ.ಗೋಪಿಹಳ್ಳಿ) ಬಿಡದಿ ಹೊಬಳಿ ರಾಮನಗರ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀಮತಿ ಆರ್.ಎಂ.ಕಲಾವತಿ, ಪಿಡಿಓ, ಎಂ.ಗೋಪಹಳ್ಳಿ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ (2) ಶ್ರೀ ಕಿರಣ್, ಅಭಿಯಂತರರು ಮತ್ತು (3) ಕಾರ್ಯನಿರ್ವಾಹಕ ಅಧಿಕಾರಿಗಳು, ರಾಮನಗರ ತಾಲ್ಲೂಕು (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ್ದಾರೆ.

**ದೂರಿನ ಸಂಕ್ಷಿಪ್ತ ವಿವರಣೆ:**

ಎದುರುದಾರರ ವಿರುದ್ಧ ಗೌರವಾನ್ವಿತ ಲೋಕಾಯುಕ್ತರು ರಾಮನಗರ ಕ್ಯಾಂಪ್‌ನಲ್ಲಿ ಇರುವಾಗ ದೂರು ಸಲ್ಲಿಸಿದ್ದಾರೆ. ನಾನು ನರೇಗ ಯೋಜನೆಯಡಿಯಲ್ಲಿ ಮೀನು ಸಾಕಾಣಿಕೆಯ ಸಲುವಾಗಿ ಕೆರೆ ನಿರ್ಮಿಸಲು ಮತ್ತು ದನದ ಕೊಟ್ಟಿಗೆ ಕಟ್ಟಲು 3 ವರ್ಷದ ಹಿಂದೆ ಅರ್ಜಿ ಸಲ್ಲಿಸಿದ್ದೆ. ನಂತರ ಹಲವಾರು ಸಲ ಪಂಚಾಯ್ತಿಗೆ ಹೊದರೂ ಸಹ ಯಾವುದೇ ಪ್ರಯೋಜನವಾಗಲಿಲ್ಲ. ಕೊನೆಗೆ ಪಿಡಿಓ ರವರು ನನ್ನ ದಾಖಲೆಗಳನ್ನು ಹಿಂದಿರುಗಿಸಿದ್ದಾರೆ. ಸಿ.ಇ.ಓ. ಜಿಲ್ಲಾ ಪಂಚಾಯ್ತಿ ಇವರಿಗೆ ಪ್ರಕರಣದ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಮತ್ತು ಲಂಚ ನಿರೋಧಕ ಕಾಯಿದೆ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಗೌರವಾನ್ವಿತರ ಆದೇಶವಾಗಿದೆ. ಸಿ.ಇ.ಓ. ರವರು ಯಾವುದೇ ವರದಿ ಸಲ್ಲಿಸಿಲಿಲ್ಲ. ಆದ್ದರಿಂದ ಪುನಃ ನೋಟಿಸು ಕೊಡಲಾಗಿ ಯಾವುದೇ ಕೆಲಸವನ್ನು ನರೇಗ ಯೋಜನೆಯಡಿಯಲ್ಲಿ ತೆಗೆದುಕೊಳ್ಳಬೇಕಾದರೆ ಮೊದಲು ಅದನ್ನು ಗ್ರಾಮ ಸಭೆಯಲ್ಲಿ ಇಟ್ಟು ಮಂಜೂರಾದ ನಂತರ ಪಿಡಿಓ ಮತ್ತು ಅಧ್ಯಕ್ಷರು ಇ.ಓ.ರವರಿಂದ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ.

ದೂರುದಾರರ ತಂದೆ ರಾಮಣ್ಣ ಅರ್ಜಿ ಸಲ್ಲಿಸಿದ್ದರೂ ಅವರ ಹೆಸರಿನಲ್ಲಿ ಮಂಜೂರಾಗಿದೆ. ಜಾಬ್ ಕಾರ್ಡ ಹೊಂದಿದವರಿಗೆ ಹಣ ಕೊಡಲಾಗಿದೆ. ಸ್ವಲ್ಪ ಭಾಗದ ಕಾಮಗಾರಿ ಮುಗಿಸಲಾಗಿದೆ. ಆದ್ದರಿಂದ ಅಳತೆ ಪುಸ್ತಕದಂತೆ 16999/- ಕೊಡಲಾಗಿದೆ. ಪಿಡಿಓ ರವರು ಲಾಗಿನ್ ಕೊಡಬೇಕಾಗಿದೆ. ಫೋಟೋಗಳಿಗೆ ಸರಿಯಾದ ಗುರುತು ಇರಲಿಲ್ಲ. ಎಂ.ಬಿ.ಪುಸ್ತಕದಲ್ಲಿ ಸಹಾಯಕ ನಿರ್ದೇಶಕರು ಮತ್ತು ತಾಂತ್ರಿಕ ಸಹಾಯಕರ ಸಹಿಗಳು ಇರಲಿಲ್ಲ. ಆದ್ದರಿಂದ ದೂರುದಾರರು ಒತ್ತಡದ ನೀತಿ ಅನುಸರಿಸುತ್ತೀದ್ದಾರೆ. ಪಿಡಿಓ ರವರಿಗೆ ಮುಕ್ತಾಯವಾದ ಹಂತದವರೆಗಿನ ಹಣ ಪಾವತಿಸುವಂತೆ ನಿರ್ದೇಶನ ಕೊಡಲಾಗಿದೆ. ಆದರೆ ಕೊಟ್ಟಿಗೆ ಕಟ್ಟಿರುವ ವಿಷಯದಲ್ಲಿ ದೂರುದಾರರ ತಂದೆ ಯಾವುದೇ ನಿರ್ಮಾಣದಲ್ಲಿ ಆಸಕ್ತಿ ತೋರಿಸಲಿಲ್ಲ. ಅಂತ ಸಿ.ಇ.ಓ. ರವರು ತಮ್ಮ ವರದಿಯಲ್ಲಿ ಈ ರೀತಿ ಅಭಿಪ್ರಾಯಪಟ್ಟಿದ್ದರಿಂದ 1 ರಿಂದ 3ನೇ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ

ದೂರುದಾರರು ತಮ್ಮ ದೂರನ್ನು ಮುಕ್ತಾಯಗೊಳಿಸುವಂತೆ ಪತ್ರ ಬರೆದಿದ್ದಾರೆ. ಸಿ.ಇ.ಓ. ರವರ ವರದಿಗೆ ಆಕ್ಷೇಪಣೆ ಸಲ್ಲಿಸುವಂತೆ ಈಗಾಗಲೇ ಕೇಳಿರುವುದರಿಂದ ಅದನ್ನು ಅನುಮತಿಸಿಲ್ಲ. 1ನೇ ಎದುರುದಾರರು ತಮ್ಮ ತಕರಾರು ಸಲ್ಲಿಸಿ ಭಾಗಶಃ ಕೆಲಸ ನಿರ್ವಹಿಸಿದ ಹಣ 16999/- ಗಳನ್ನು ಕೂಲಿ ಕಾರ್ಮಿಕರ ಖಾತೆಗೆ ಪಾವತಿಸಲಾಗಿದೆ. ಉಳಿದ

5157/- ಗಳನ್ನು ನೂತನ ಅಧ್ಯಕ್ಷರು ಆಯ್ಕೆಯಾದ ತಕ್ಷಣ ಕಾರ್ಮಿಕರ ಖಾತೆಗೆ ಜಮಾ ಮಾಡಲಾಗುವುದು. ಫಲಾನುಭವಿಗಳ ಖಾತೆಗೆ ಸಾಮಗ್ರಿಯ ಮೊತ್ತ 6200/- ಜಮಾ ಆಗಿದೆ. ದಾಖಲೆಗಳನ್ನು ಅವಗಾಹನೆಗೆ ಸಲ್ಲಿಸಲಾಗಿದೆ. ಅಂತ ತಿಳಿಸಿದ್ದು, 2ನೇ ಎದುರುದಾರರು ನಾನು ತಾಂತ್ರಿಕ ಸಹಾಯಕ ಅಭಿಯಂತರರಾಗಿ ಅಳತೆ ಪುಸ್ತಕದಲ್ಲಿ ಭಾಗಶಃ ನಿರ್ವಹಿಸಲಾದ ಕಾಮಗಾರಿಯ ಅಳತೆಯನ್ನು ನಮೂದಿಸಿದ್ದೇನೆ. ಫೋಟೋ ತೆಗೆದು ಪಂಚಾಯ್ತಿಗೆ ಸಲ್ಲಿಸಿದ್ದಾರೆ. ನನ್ನ ಮೇಲೆ ದೂರುದಾರರು ಯಾವುದೇ ಅರ್ಜಿ ಸಲ್ಲಿಸಿಲ್ಲ ಎನ್ನುತ್ತಾರೆ.

3ನೇ ಎದುರುದಾರರು ನಾನು ಎಲ್ಲೂ ಸಹ ಧನಂಜಯ ಇವರಿಗೆ ಪಿಡಿಓ ರವರ ಜೊತೆ ಅಡ್ಜೆಸ್ಟ್ ಮಾಡಿಕೊಂಡು ಹೋಗಿ ಎಂದು ಹೇಳಿಲ್ಲ ಸಿ.ಇ.ಓ.ರವರ ವರದಿಯನ್ನು ನಾನು ಗೌರವಿಸುತ್ತೇನೆ ಅಂತ ಹೇಳುತ್ತಾರೆ.

ಸಿ.ಇ.ಓ. ರವರ ವರದಿ ಪ್ರಕಾರ ದೂರುದಾರರು ನರೇಗ ಕಾರ್ಯಕ್ರಮದಡಿ ತನಗೆ ಹಣ ಪಾವತಿಯಾಗಿಲ್ಲ ಅಂತ ಸಲ್ಲಿಸಿದ ದೂರಿನ ಬಗ್ಗೆ ಪಿ.ಡಿ.ಓ. ರವರನ್ನು ವಿಚಾರಣೆ ಮಾಡಿದ್ದು, ಜಾಬ್ ಕಾರ್ಡ ಹೊಂದಿದವರಿಗೆ ಮಾತ್ರ ಕೂಲಿ ವೇತನ ಪಾವತಿಸಬೇಕಾಗುತ್ತದೆ. ದೂರು ಅರ್ಜಿದಾರರು ಮೀನು ಸಾಕಾಣಿಕೆ ಹೊಂಡವನ್ನು ಭಾಗಶಃ ನಿರ್ವಹಿಸಿದ್ದು ಈ ಬಗ್ಗೆ ಹಣ ಪಾವತಿಯಾಗದೆ ಇರುವುದು ತಾಂತ್ರಿಕ ದೋಷಗಳಿಂದ. ಅಧಿಕ ಕೆಲಸದ ಒತ್ತಡದಿಂದ ಗಮನಿಸಲಾಗಿಲ್ಲ ಅನುದಾನ ಬಿಡುಗಡೆ ನಂತರ ಕ್ರಮ ವಹಿಸುತ್ತೇನೆ ಅಂತ ಹೇಳಿದ್ದಾರೆ. ಅಪೂರ್ಣ ಮೀನಿನ ತೊಟ್ಟಿಗೆ ಪೂರ್ಣ ಬಿಲ್ಲು ಪಾವತಿಸುವಂತೆ ಒತ್ತಾಯಿಸುತಿದ್ದರು ಮತ್ತು ದನದ ಕೊಟ್ಟಿಗೆ ಕಟ್ಟದೆ ಎನ್.ಎಂ.ಆರ್ ತೆಗೆಯಲು ಒತ್ತಾಯಿಸಿದ್ದರಿಂದ ಕಡತವನ್ನು ಕಸಿದುಕೊಂಡು ಹೋಗಿ ಈಗ ಕಡತ ಬಿಸಾಡಿದ್ದಾರೆ ಅಂತ ಆರೋಪ ಮಾಡಿದ್ದಾರೆ ಎನ್ನುತ್ತಾರೆ.

ಈ ವಿವರಗಳನ್ನು ಗಮನಿಸಿದಾಗ ಪಂಚಾಯ್ತಿಯ ಒಂದು ಕಡತವನ್ನು ದೂರುದಾರರು ತಾವೇ ಕಸಿದುಕೊಂಡು ಹೋಗಿದ್ದಲ್ಲಿ ಪಿ.ಡಿ.ಓ ರವರು ಏಕೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ ಎನ್ನುವ ಪ್ರಶ್ನೆ ಬರುತ್ತದೆ. ಕಡತವನ್ನು ದೂರುದಾರರೇ ಕಸಿದುಕೊಂಡು ಹೋಗಿದ್ದಾರೆ ಅಂತ ಪಿ.ಡಿ.ಓ ರವರು ಈ ಮೊದಲು ಎಲ್ಲಿಯೂ ಹೇಳಲಿಲ್ಲ ಸಿ.ಇ.ಓ ರವರ ಮುಂದೆ ಮಾತ್ರ ಹಾಗೆಂದು ಹೇಳುತ್ತಾರೆ. ಪಿ.ಡಿ.ಓ ರವರು ಕೊಟ್ಟಿರುವ ಉತ್ತರದಲ್ಲಿಯೇ ದೂರುದಾರರ ಹಣ ಪಾವತಿ ಮಾಡಲು ಬೇಕೆಂದೇ ತಡಮಾಡಿರುವುದು ಗೊತ್ತಾಗುತ್ತದೆ. 2 ಮತ್ತು 3ನೇ ಎದುರುದಾರರು ಕಿರಣ್ ಎನ್ನುವ ಅಭಿಯಂತರರನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದರು ಅವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ಅಂತ ಸಿ.ಇ.ಓ ರವರು ಹೇಳಿದ್ದಾರೆ. 3ನೇ ಎದುರುದಾರರ ಮೇಲೆ ಯಾವುದೇ ಸಾಂದರ್ಭಿಕ ಸಾಕ್ಷಿಗಳಿಲ್ಲ ಅಂತ ಹೇಳಿದ್ದಾರೆ. ಈ ವರದಿಯನ್ನು ಅಲ್ಲಗಳೆಯುವಂತಹ ಯಾವುದೇ ಆಕ್ಷೇಪಣೆಗಳನ್ನು 1ನೇ ಎದುರುದಾರರು ತೆಗೆದುಕೊಂಡಿಲ್ಲ. ಭಾಗಶಃ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರವು ಸಹ ಅವರಿಗೆ ಹಣ ಬಿಡುಗಡೆ ಮಾಡಲು ತಡಮಾಡಿ 1ನೇ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆ. ಕೆಲಸದ ಒತ್ತಡ ಮತ್ತು ತಾಂತ್ರಿಕ ದೋಷ ಎನ್ನುವ 2 ಕಾರಣಗಳನ್ನು ಕೊಟ್ಟಿದ್ದು ಯಾವ ತಾಂತ್ರಿಕ ದೋಷದಿಂದ ಹಣ ಪಾವತಿಯಾಗಿಲ್ಲ ಅಂತ ವಿವರಿಸಿಲ್ಲ 2 ಮತ್ತು 3ನೇ ಎದುರುದಾರರ ವಿರುದ್ಧ ಪ್ರಕರಣವನ್ನು ಕೈಬಿಡಲಾಗಿದೆ.

ಆದುದರಿಂದ, 1ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(i)(ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ 1ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ 1ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಶ್ರೀಮತಿ ಆರ್.ಎಂ.ಕಲಾವತಿ, ಪಿಡಿಓ, ಎಂ.ಗೋಪಹಳ್ಳಿ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/411/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 19-05-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಆರ್.ಎಂ.ಕಲಾವತಿ, ಪಿಡಿಓ, ಎಂ.ಗೋಪಹಳ್ಳಿ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ 14(ಎ) ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಇವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 35 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಮನಗರ ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ.
6) ಶ್ರೀಮತಿ ಆರ್.ಎಂ.ಕಲಾವತಿ, ಪಿಡಿಓ, ಎಂ.ಗೋಪಹಳ್ಳಿ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ.
7) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.